## ಮಾನ್ಯ ಕರ್ನಾಟಕ ವಿಧಾನಪರಿಷತ್ತಿನ ಸದಸ್ಯರಾದ ಶ್ರೀ ಮರಿತಿಬ್ಬೇಗೌಡ, ಇವರ ನಿಯಮ 72ರಡಿ ಗಮನ ಸೆಳೆಯುವ ಸೂಚನೆಗೆ ಉತ್ತರಿಸುವ ಬಗ್ಗೆ.

**ವಿಷಯ:**

ಮೈಸೂರು ವಿಶ್ವವಿದ್ಯಾಲಯದ ಕುಲಪತಿ ಆಯ್ಕೆ ಸಂಬಂಧ ದಿನಾಂಕ:20.12.2022ರಂದು ನಡೆದ ಶೋಧನಾ ಸಮಿತಿ ಸಭೆಗೆ ಕುಲಪತಿ ಹುದ್ದೆಯ ಆಕಾಂಕ್ಷಿಗಳ ಪಟ್ಟಿಯನ್ನು ಉನ್ನತ ಶಿಕ್ಷಣ ಇಲಾಖೆ ಸಲ್ಲಿಸುವಾಗ ಕೆಲವರ ಸಂಬಂಧ ವಿಶ್ವವಿದ್ಯಾಲಯಗಳಿಂದ ಪಡೆದ ತಪ್ಪು ಮಾಹಿತಿಯನ್ನು ಪರಿಶೀಲಿಸದೆ ವಿ.ವಿ. ಗಳ ಮಾಹಿತಿಯನ್ನೇ ಆಧಾರವಾಗಿ ಇಟ್ಟುಕೊಂಡು ಯು.ಜಿ.ಸಿ. ನಿಯಮಾವಳಿಯಂತೆ ಕೆಲವರು ಆಯ್ಕೆಗೆ ಅರ್ಹರಲ್ಲವೆಂದು ಮೊದಲೆ ನಿರ್ಧಾರ ಮಾಡಿ, ಅವರ ಹೆಸರುಗಳನ್ನು ಒಳಗೊಂಡಂತೆ ಶೋಧನಾ ಸಮಿತಿಗೆ ಪಟ್ಟಿ ಸಲ್ಲಿಸಿರುವುದು ಮತ್ತು ಮೈಸೂರು ವಿಶ್ವವಿದ್ಯಾಲಯದಲ್ಲಿ ಸದರಿ ಶೋಧನಾ ಸಮಿತಿಗೆ ಸದಸ್ಯರನ್ನು ಆಯ್ಕೆ ಮಾಡುವಾಗ ಸಿಂಡಿಕೇಟ್ ಸಭೆಯ ನಿಯಮಬಾಹಿರ ನಿರ್ಣಯವನ್ನು ಉನ್ನತ ಶಿಕ್ಷಣ ಇಲಾಖೆ ಪರಿಶೀಲಿಸದೆ ಶೋಧನಾ ಸಮಿತಿಗೆ ಮಾಹಿತಿ ನೀಡದೆ ಇರುವುದರಿಂದ ಉಂಟಾಗಿರುವ ಗಂಭೀರ ಸಮಸ್ಯೆ ಕುರಿತು ಮಾನ್ಯ ಉನ್ನತ ಶಿಕ್ಷಣ, ಮಾಹಿತಿ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಕೌಶಲ್ಯಾಭಿವೃದ್ಧಿ ಸಚಿವರಲ್ಲಿ ಪ್ರಸ್ತಾಪಬಯಸುತ್ತೇನೆ.

**ಸರ್ಕಾರದ ಉತ್ತರ:**

ಮಾನ್ಯ ರಾಜ್ಯಪಾಲರ ಸಚಿವಾಲಯದ ಅಧಿಸೂಚನೆ ಸಂಖ್ಯೆ: GS 09 MUM 2022, Dated: 03.08.2022ರಲ್ಲಿ Prof. G. Hemantha Kumar, Professor, Department of Studies in Computer Science, University of Mysore, Mysuru, ಇವರ ಅಧಿಕಾರವಧಿಯು 16.11.2022ಕ್ಕೆ ಮುಕ್ತಾಯಗೊಳ್ಳುವುದರಿಂದ, ನೂತನ ಕುಲಪತಿಗಳ ನೇಮಕಾತಿ ಪ್ರಕ್ರಿಯೆಯನ್ನು ಪ್ರಾರಂಭಿಸುವಂತೆ ಸೂಚಿಸಿರುತ್ತಾರೆ.

ಮೇಲ್ಕಂಡ ಸೂಚನೆಯನುಸಾರ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ, 2000ರ ಪ್ರಕರಣ 14(2)ರಡಿ ಮೈಸೂರು ವಿಶ್ವವಿದ್ಯಾಲಯದ ಕುಲಪತಿ ಸ್ಥಾನಕ್ಕೆ ಸೂಕ್ತ ವ್ಯಕ್ತಿಯನ್ನು ನೇಮಿಸುವ ಸಲುವಾಗಿ ಈ ಕೆಳಕಂಡ ತಜ್ಞರುಗಳನ್ನೊಳಗೊಂಡ ಶೋಧನಾ ಸಮಿತಿಯನ್ನು ಅಧಿಸೂಚನೆ ಸಂ. ಇಡಿ 57 ಯುಎಂವಿ 2022, ದಿನಾಂಕ:02.11.2022ರಲ್ಲಿ ರಚಿಸಲಾಗಿರುತ್ತದೆ.

ಮೈಸೂರು ವಿಶ್ವವಿದ್ಯಾಲಯದ ಕುಲಪತಿಯ ಹುದ್ದೆಗೆ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000ರ ಪ್ರಕರಣ 14ರಲ್ಲಿನ ಉಪಬಂಧಗಳನುಸಾರ ಹಾಗೂ ಯುಜಿಸಿ ರೆಗ್ಯುಲೇಷನ್ 2018 ರ ನಿಯಮ 7.3(i) ರನ್ವಯ ನೇಮಕಾತಿ ಮಾಡಲು ಈ ಕೆಳಕಂಡ ಅರ್ಹತೆಯುಳ್ಳ ಪ್ರಾಧ್ಯಾಪಕರು/ಶಿಕ್ಷಣ ತಜ್ಞರುಗಳಿಂದ ಅರ್ಜಿಯನ್ನು ಆಹ್ವಾನಿಸಲು ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 57 ಯುಎಂವಿ 2022, ದಿನಾಂಕ:08.11.2022 ರಂದು ಅಧಿಸೂಚನೆಯನ್ನು ಹೊರಡಿಸಲಾಗಿರುತ್ತದೆ.

ಈ ಅಧಿಸೂಚನೆಯನ್ವಯ ಮೈಸೂರು ವಿಶ್ವವಿದ್ಯಾಲಯದ ಕುಲಪತಿ ಹುದ್ದೆಯನ್ನು ಯುಜಿಸಿ ನಿಯಮಾನುಸಾರ ಭರ್ತಿ ಮಾಡುವ ಸಲುವಾಗಿ ಪತ್ರಿಕಾ ಜಾಹೀರಾತನ್ನು ಅತ್ಯಧಿಕ ಪ್ರಸಾರವುಳ್ಳ ರಾಜ್ಯ ಮತ್ತು ರಾಷ್ಟ್ರ ಮಟ್ಟದ ಎಲ್ಲಾ ಪ್ರಮುಖ ಹಾಗೂ ಹೆಚ್ಚು ಪ್ರಕಟಣೆಗೊಳ್ಳುವ ದಿನಪತ್ರಿಕೆಗಳಲ್ಲಿ (ಕನ್ನಡ ಮತ್ತು ಆಂಗ್ಲಭಾಷೆ) ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯಿಂದ ದಿನಾಂಕ:10.11.2022ರಂದು ಪ್ರಕಟಿಸಲಾಗಿರುತ್ತದೆ. ಸದರಿ ಪ್ರಕಟಣೆಯನ್ವಯ ಉನ್ನತ ಶಿಕ್ಷಣ ಇಲಾಖೆಯಲ್ಲಿ ಒಟ್ಟು 71 ಅರ್ಜಿಗಳು ಸ್ವೀಕೃತವಾಗಿರುತ್ತವೆ.

ಮೈಸೂರು ವಿಶ್ವವಿದ್ಯಾಲಯದಲ್ಲಿ ಕಾರ್ಯನಿರತ/ನಿವೃತ್ತ ಪ್ರಾಧ್ಯಾಪಕರುಗಳ ವಿರುದ್ಧ ಇಲಾಖಾ/ಕ್ರಿಮಿನಲ್ ವಿಚಾರಣೆಗಳು ಬಾಕಿ ಇರುವ ಅಥವಾ ಹೂಡಲು ಉದ್ದೇಶಿಸಲಾಗಿರುವ ಬಗ್ಗೆ ಹಾಗೂ ಬಾಕಿಇದ್ದ ಇಲಾಖಾ ವಿಚಾರಣೆಗಳು ದಂಡನೆಯಲ್ಲಿ ಪರ್ಯಾವಸಾನಗೊಂಡಿರುವ ಬಗ್ಗೆ ಹಾಗೂ ಅವರ ನೇಮಕಾತಿ ಕುರಿತಂತೆ ಏನಾದರೂ ವಿವಾದಗಳು ಇರುವ ಬಗ್ಗೆ ಮತ್ತು ಅವರು ಎದುರಿಸುತ್ತಿರುವ ಗಂಭೀರ ಸ್ವರೂಪದ ಆರೋಪಗಳ ಮಾಹಿತಿಯನ್ನು ಸಲ್ಲಿಸುವಂತೆ ಸರ್ಕಾರದ ಪತ್ರ ಸಂಖ್ಯೆ: ಇಡಿ 57 ಯುಎಂವಿ 2022, ದಿನಾಂಕ 03.12.2022ರ ಪತ್ರದಲ್ಲಿ ವಿಶ್ವವಿದ್ಯಾಲಯವನ್ನು ಕೋರಲಾಗಿತ್ತು. ಅದರಂತೆ, ಮೈಸೂರು ವಿಶ್ವವಿದ್ಯಾಲಯದ ಕಛೇರಿ ಕಡತಗಳಲ್ಲಿ ಲಭ್ಯವಿರುವ ಮಾಹಿತಿಗಳನ್ನು ಆಧರಿಸಿ ವಿಶ್ವವಿದ್ಯಾಲಯದಿಂದ ದಿನಾಂಕ: 06.12.2022ರ ಪತ್ರದಲ್ಲಿ ಮೈಸೂರು ವಿಶ್ವವಿದ್ಯಾಲಯದಲ್ಲಿ ಕಾರ್ಯನಿರತ/ನಿವೃತ್ತ ಪ್ರಾಧ್ಯಾಪಕರುಗಳ ವಿರುದ್ಧ ಇಲಾಖಾ/ಕ್ರಿಮಿನಲ್ ವಿಚಾರಣೆಗಳು ಬಾಕಿ ಇರುವ ಅಥವಾ ಹೂಡಲು ಉದ್ದೇಶಿಸಲಾಗಿರುವ ಮತ್ತು ನೇಮಕಾತಿ ವಿವಾದಗಳ ಬಗ್ಗೆ ಮಾಹಿತಿ ಒದಗಿಸಿರುತ್ತಾರೆ.

ಅದರನ್ವಯ ಸ್ವೀಕೃತವಾಗಿರುವ ಒಟ್ಟು ಅರ್ಜಿಗಳನ್ನು ಯುಜಿಸಿ ರೆಗ್ಯುಲೇಷನ್ 2018 ರ ನಿಯಮ 7.3(i) ಹಾಗೂ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಕಾಯ್ದೆ 2000ರ ನಿಯಮ 14 ರಲ್ಲಿ ಉಲ್ಲೇಖಿಸಿರುವ ನಿಯಮಗಳನ್ವಯ ಪರಿಶೀಲಿಸಿ ಅರ್ಜಿದಾರರು ಸಲ್ಲಿಸಿರುವ ಮಾಹಿತಿ ಪ್ರಕಾರ ಸರ್ಕಾರಿ ಅಧಿಸೂಚನೆ ಸಂ. ಇಡಿ 57 ಯುಎಂವಿ 2022, ದಿನಾಂಕ:08.12.2022ರಲ್ಲಿ ನೀಡಲಾದ ಸೂಚನೆಗಳ ಪ್ರಕಾರ ಅನರ್ಹವಾದ ಅರ್ಜಿಗಳನ್ನು ಪರಿಗಣಿಸದೆ ತಿರಸ್ಕರಿಸಲಾಗಿರುತ್ತದೆ.

ಉನ್ನತ ಶಿಕ್ಷಣ ಇಲಾಖೆಯು ಮೈಸೂರು ವಿಶ್ವವಿದ್ಯಾಲಯದ ಕುಲಪತಿಗಳ ಹುದ್ದೆಯ ನೇಮಕಾತಿ ಪ್ರಕ್ರಿಯೆಯನ್ನು ಪಾರದರ್ಶಕತೆಯಿಂದ ನಡೆಸುವ ಸಲುವಾಗಿ ಅರ್ಜಿದಾರರು ಸಲ್ಲಿಸಿರುವ ದಾಖಲೆಗಳನ್ವಯ ಪರಿಶೀಲಿಸಿ ಮೇಲೆ ತಿಳಿಸಿರುವಂತೆ ಪರಿಗಣಿಸಲಾಗದ/ತಿರಸ್ಕರಿಸಿದ ಅರ್ಜಿಗಳ ಮಾಹಿತಿಯನ್ನು ಉನ್ನತ ಶಿಕ್ಷಣ ಇಲಾಖೆಯ ಅಧಿಕೃತ ಜಾಲತಾಣದಲ್ಲಿ ಶೋಧನಾ ಸಮಿತಿಯು ನಡೆಯುವ ಪೂರ್ವದಲ್ಲಿ ಪ್ರಕಟಿಸಿ, ಶೋಧನಾ ಸಮಿತಿಯ ಸದಸ್ಯರಿಗೆ ಸಮಿತಿ ಸಭೆಯ ದಿನಾಂಕದಂದು ನೀಡಲಾಗಿರುತ್ತದೆಯೇ ವಿನಃ ಸದರಿ ಪ್ರಕ್ರಿಯೆಯಲ್ಲಿ ಯುಜಿಸಿ ನಿಯಮವನ್ನಾಗಲೀ ಅಥವಾ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಕಾಯ್ದೆ 2000ರ ನಿಯಮಗಳನ್ನಾಗಲೀ ಉಲ್ಲಂಘಿಸಿರುವುದಿಲ್ಲ.

ಮುಂದುವರೆದು, ಪ್ರೊ. ಹೆಚ್. ರಾಜಶೇಖರ್, Dean, Dept of Commerce and Vice Chancellor (In-Charge), University of Mysore, Mysuru, ಇವರು ಮೈಸೂರು ವಿಶ್ವವಿದ್ಯಾಲಯದ ನೂತನ ಕುಲಪತಿಗಳ ಆಯ್ಕೆ ಸಂಬಂಧ ಸರ್ಕಾರದಿಂದ ರಚಿತವಾದ ಶೋಧನಾ ಸಮಿತಿಯ ಅಧಿಸೂಚನೆ ಸಂಖ್ಯೆ: ಇಡಿ 57 ಯುಎಂವಿ 2022, ದಿನಾಂಕ: 02.11.2022ರ ನಂತರದಲ್ಲಿ ಕೈಗೊಂಡ ಎಲ್ಲಾ ಪ್ರಕ್ರಿಯೆಗಳಿಗೆ ತಡೆ ನೀಡುವಂತೆ ಮತ್ತು ಸದರಿಯವರ ವಿರುದ್ಧ ಹೊರಡಿಸಲಾದ ತನಿಖಾ ಸಮಿತಿ ರಚನೆಗೆ ಸಂಬಂಧಿಸಿದ ಆದೇಶವನ್ನು ರದ್ದುಗೊಳಿಸುವಂತೆ ಮತ್ತು ಸದರಿಯವರು ಕುಲಪತಿಗಳ ಹುದ್ದೆಗೆ ಸಲ್ಲಿಸಿದ ಅರ್ಜಿಯನ್ನು ಪರಿಗಣಿಸುವಂತೆ ಕೋರಿ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ: 25759/2022 ಅನ್ನು ದಾಖಲಿಸಿರುತ್ತಾರೆ. ಈ ಪ್ರಕರಣದಲ್ಲಿ ಸರ್ಕಾರವು ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000ರ ಪ್ರಕರಣ 14ರಲ್ಲಿನ ಉಪಬಂಧಗಳನುಸಾರ ಹಾಗೂ ಯುಜಿಸಿ ರೆಗ್ಯುಲೇಷನ್ 2018 ರ ನಿಯಮದನ್ವಯ ಕೈಗೊಂಡಿರುವ ಕ್ರಮದ ಕುರಿತು ಆಕ್ಷೇಪಣಾ ಹೇಳಿಕೆಯನ್ನು ಮಾನ್ಯ ನ್ಯಾಯಾಲಯದಲ್ಲಿ ದಾಖಲಿಸಿ ಮಧ್ಯಂತರ ಆದೇಶವನ್ನು ತೆರವುಗೊಳಿಸಲು ಹಾಗೂ ಪ್ರಕರಣವನ್ನು ಇತ್ಯರ್ಥಗೊಳಿಸಲು ಈಗಾಗಲೇ ಕ್ರಮವಹಿಸಲಾಗಿದೆ.

ಈ ಮಧ್ಯೆ, ಮಾನ್ಯ ರಾಜ್ಯಪಾಲರಿಗೆ Prof. N.K. Lokanath, Director, Planning, Monitoring & Evaluation of Board, University of Mysore ಇವರು ಮೈಸೂರು ವಿಶ್ವವಿದ್ಯಾಲಯದ ಕುಲಪತಿಗಳ ಹುದ್ದೆಗೆ ಅರ್ಜಿ ಸಲ್ಲಿಸಿದ್ದು, ಉನ್ನತ ಶಿಕ್ಷಣ ಇಲಾಖೆಯಿಂದ ಸದರಿ ಹುದ್ದೆಗೆ ಸ್ವೀಕರಿಸಲಾದ ಒಟ್ಟು ಅರ್ಜಿಗಳ ಮಾಹಿತಿಯನ್ನು ಪ್ರಚುರಪಡಿಸಿರುವ Main List Document ನಲ್ಲಿ ಕ್ರ.ಸಂ. 28 ರಲ್ಲಿರುವ 09 ನೇ ಕಾಲಂ ನಲ್ಲಿ ನೇಮಕಾತಿಗೆ ಸಂಬಂಧಿಸಿದಂತೆ ಪ್ರಕರಣ ಬಾಕಿಯಿರುವುದರಿಂದ, ಸದರಿಯವರು ಕುಲಪತಿ ಹುದ್ದೆಗೆ ಅನರ್ಹರೆಂದು ತಿಳಿಸಿರುವುದರ ಕುರಿತು ದೂರು ನೀಡಿರುವ ಹಿನ್ನೆಲೆಯಲ್ಲಿ, ಈ ಬಗ್ಗೆ ನಿಯಮಾನುಸಾರ ಪರಿಶೀಲಿಸಿ, ವಿಸ್ತೃತ ವರದಿಯನ್ನು ಸಿದ್ಧಪಡಿಸಿ, ಸದರಿ ವರದಿಗೆ ಮಾನ್ಯ ಉನ್ನತ ಶಿಕ್ಷಣ ಸಚಿವರ ಸೂಕ್ತ ಅಭಿಪ್ರಾಯವನ್ನು ಪಡೆದು, ಮಾನ್ಯ ರಾಜ್ಯಪಾಲರ ಆದ್ಯ ಗಮನಕ್ಕೆ ವರದಿ ಸಲ್ಲಿಸುವಂತೆ ಮಾನ್ಯ ರಾಜ್ಯಪಾಲರ ಕಛೇರಿಯಿಂದ ಕೋರಿರುತ್ತಾರೆ.

ಈ ಪ್ರಕರಣದಲ್ಲಿ ಪ್ರೊ|| ಎನ್.ಕೆ. ಲೋಕನಾಥ್ ಅವರು 2006-07ನೇ ಸಾಲಿನಲ್ಲಿ ಮೈಸೂರು ವಿಶ್ವವಿದ್ಯಾಲಯದಲ್ಲಿ ನೇಮಕಗೊಂಡಿದ್ದು, ಈ ತಂಡದಲ್ಲಿ ನೇಮಕಗೊಂಡ ಅಭ್ಯರ್ಥಿಗಳ ನೇಮಕಾತಿಗಳನ್ನು ತನಿಖೆಗೆ ಒಳಪಡಿಸಲಾಗಿದ್ದು, ಸದರಿ ಪ್ರಕರಣದಲ್ಲಿ ಈವರೆಗೂ ಅಂತಿಮ ಆದೇಶವಾಗಿಲ್ಲದಿರುವುದರಿಂದ, ಪ್ರೊ|| ಲೋಕನಾಥ್ ಅವರ ನೇಮಕಾತಿಯು ಅಕ್ರಮವೆಂದು ಈ ಹಂತದಲ್ಲಿ ನಿರ್ಣಯಿಸಲಾಗದ ವಿಚಾರವಾಗಿರುವ ಹಿನ್ನೆಲೆಯಲ್ಲಿ ಮತ್ತು ಶೋಧನಾ ಸಮಿತಿಯ ಸದಸ್ಯರೊಬ್ಬರನ್ನಾಗಿ ಡಾ|| ಶ್ರೀನಿವಾಸಕುಮಾರ್ ಅವರನ್ನು ಆಯ್ಕೆ ಮಾಡಿರುವ ಸಿಂಡಿಕೇಟ್ ಸಭೆಯಲ್ಲಿ ಪ್ರೊ|| ಜಿ. ವೆಂಕಟೇಶ್‌ಕುಮಾರ್ ಅವರು ಹಾಜರಿದ್ದು ಅವರು ಸಹ ಕುಲಪತಿಗಳ ಹುದ್ದೆಗೆ ಒಬ್ಬರು ಅರ್ಜಿದಾರರಾಗಿರುವುದು ನ್ಯಾಯಬದ್ಧವಾಗಿಲ್ಲದಿರುವುದನ್ನು ಗಮನಿಸಿ, ಮೈಸೂರು ವಿಶ್ವವಿದ್ಯಾಲಯದ ಕುಲಪತಿಗಳ ಆಯ್ಕೆಯ ಶೋಧನಾ ಸಮಿತಿಯನ್ನು ಪುನರ್ ರಚಿಸುವ ಅವಶ್ಯಕತೆ ಇದೆಯೆಂದು ಮಾನ್ಯ ರಾಜ್ಯಪಾಲರಿಗೆ ನಿವೇದನಾ ಟಿಪ್ಪಣಿ ಮೂಲಕ ವರದಿಯನ್ನು ಸಲ್ಲಿಸಲು ಕ್ರಮವಹಿಸಲಾಗಿದೆ.

ಮುಂದುವರೆದು, ರಾಜ್ಯದ ವಿಶ್ವವಿದ್ಯಾಲಯಗಳ ಕುಲಪತಿಗಳ ಹುದ್ದೆಗೆ ಅರ್ಜಿ ಸಲ್ಲಿಸಲು ಉದ್ದೇಶಿಸುವವರು ವಿಶ್ವವಿದ್ಯಾಲಯದ ಸಿಂಡಿಕೇಟ್ ಸದಸ್ಯರುಗಳಲ್ಲಿ ಒಬ್ಬರಾಗಿದ್ದರೂ ಕೂಡ, ಅಂತಹ ಸದಸ್ಯರು ವಿಶ್ವವಿದ್ಯಾಲಯದ ಸಿಂಡಿಕೇಟ್‌ನಿಂದ ಶೋಧನಾ ಸಮಿತಿಗೆ ನಾಮನಿರ್ದೇಶನ ಮಾಡಲು ನಡೆಯುವ ಸಿಂಡಿಕೇಟ್ ಸಭೆಗಳಲ್ಲಿ ಭಾಗವಹಿಸತಕ್ಕದ್ದಲ್ಲವೆಂದು ಸರ್ಕಾರವು ಸ್ಪಷ್ಟಪಡಿಸಿದೆ. ಈ ನಿರ್ದೇಶನವನ್ನು ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದೆಂದು ತಿಳಿಸಿ, ಒಂದು ವೇಳೆ ಈ ನಿಯಮ ಉಲ್ಲಂಘಿಸಿದ್ದಲ್ಲಿ ನಿಯಮಾನುಸಾರ ಸಂಬಂಧಪಟ್ಟವರ ಮೇಲೆ ಶಿಸ್ತು ಕ್ರಮ ಜರುಗಿಸಲಾಗುವುದೆಂದು ಸೂಚಿಸಿ, ಸರ್ಕಾರದ ಹಂತದಲ್ಲಿ ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳಿಗೆ ಸುತ್ತೋಲೆಯನ್ನು ಹೊರಡಿಸಲು ಕ್ರಮವಹಿಸಲಾಗಿ ಪ್ರಸ್ತುತ ಸರ್ಕಾರದ ಪರಿಶೀಲನೆಯ ಹಂತದಲ್ಲಿದೆ.

********************************

ಸಂಖ್ಯೆ: ಇಡಿ 1[illegible] ಯುಎಂವಿ 2023

(ಡಾ: ಅಶ್ವಥ್ ನಾರಾಯಣ ಸಿ.ಎನ್.)
ಉನ್ನತ ಶಿಕ್ಷಣ, ಐಟಿ ಬಿಟಿ, ವಿಜ್ಞಾನ ಮತ್ತು
ತಂತ್ರಜ್ಞಾನ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ
ಮತ್ತು ಜೀವನೋಪಾಯ ಸಚಿವರು